2. ದಿನಾಂಕ 12-2-93ರಂದು ಪಾಂಡವಪುರ ತಾಲ್ಲೂಕಿನ ಹುಳಗೆರೆ ಗ್ರಾಮದಲ್ಲಿ ಸಾಮೂಹಿಕ ಕೊಲೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಅಧ್ಯಕ್ಷರೆ, 12-2-1993ರ ಶುಕ್ರವಾರ ರಾತ್ರಿ ಪಾಂಡವಪುರ ತಾಲ್ಲೂಕಿನ ಹುಳಗೆರೆ ಗ್ರಾಮದಲ್ಲಿ ಶ್ರೀ ರಾಮಚಂದ್ರೇಗೌಡ ಮತ್ತು ಆತನ ಹೆಂಡತಿ ತಾಯಮ್ಮ ಹಾಗೂ ವಸಂತ್ ಮತ್ತು ವಿನೋದ್ ಎನ್ನತಕ್ಕಂಥ ಅವರ ಇಬ್ಬರು ಗಂಡು ಮಕ್ಕಳನ್ನು ಸಾಮೂಹಿಕವಾಗಿ ಕೊಲೆ ಮಾಡಲಾಗಿದೆ. ಈ ಒಂದು ವಿಷಯ ಬಹಳ ಗಂಭೀರವಾದುದು. ಒಂದೇ ಮನೆಯ ಗಂಡ, ಹೆಂಡತಿ ಮತ್ತು ಅವರ ಇಬ್ಬರು ಮಕ್ಕಳನ್ನು ಕೊಲೆ ಮಾಡಿ ಇಡೀ ಕುಟುಂಬವನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ. ಈ ಬಗ್ಗೆ ಫಿರ್ಯಾದಿಯನ್ನು ಕೊಡಲಾಗಿದೆ. ಆದರೆ ಒಂಭತ್ತು ಜನ ಆರೋಪಿಗಳ ಪಟ್ಟಿಯನ್ನು ಕೊಟ್ಟರೆ ಅದರಲ್ಲಿ 9ನೇ ಆರೋಪಿಯಾದ ಸಾಮಾನ್ಯ ಕೂಲಿ ಮಾಡತಕ್ಕಂಥ ರಂಗಯ್ಯ ಎನ್ನುವವರನ್ನು ಮಾತ್ರ ಪೋಲೀಸ್‌ನವರು ದಸ್ತಗಿರಿ ಮಾಡಿದ್ದಾರೆ. ಇನ್ನು ಉಳಿದ ಎಂಟು ಮಂದಿಯನ್ನು ಪೋಲೀಸ್‌ನವರು ದಸ್ತಗಿರಿ ಮಾಡಿಲ್ಲ. ಕಾರಣವೇನೆಂದರೆ, ರಾಮಚಂದ್ರಗೌಡ ಮತ್ತು ನಳ್ಳೀನಹಳ್ಳಿ ಗ್ರಾಮದ ದೊಳ್ಳೇಗೌಡರ ಮಗ ನರಸಿಂಹಗೌಡನ ಹತ್ತಿರ ಸ್ನೇಹವಿತ್ತು ಮತ್ತು ವ್ಯವಹಾರವೂ ಇತ್ತು. ಇವರಿಬ್ಬರಲ್ಲಿ ಲೇವಾದೇವಿ ವ್ಯವಹಾರವಿತ್ತು. ಈ ನರಸಿಂಹೇಗೌಡರು ರಾಯಚಂದ್ರಗೌಡನಿಗೆ 20 ಸಾವಿರ ರೂಪಾಯಿ ಸಾಲವನ್ನು ಕೊಡಬೇಕಾಗಿತ್ತು, ರಾಮಚಂದ್ರಗೌಡರನ್ನು ಎಲ್ಲಿ ಕೊಲೆ ಮಾಡಿದ್ದಾರೆ ಅದೇ ಜಾಗದಲ್ಲಿ ಅವರ ವ್ಯವಹಾರಕ್ಕೆ ಸಂಬಂಧಪಟ್ಟ ಅಂದರೆ ಜಮೀನಿನ ಮತ್ತು ಸಾಲವನ್ನು ತೆಗೆದುಕೊಂಡಿದ್ದ ಬಗೇಗಿನ ಕಾಗದ ಪತ್ರಗಳನ್ನು ಸುಟ್ಟು ಹಾಕಿದ್ದಾರೇ. ಈ ಒಂದು ಪ್ರಕರಣದಲ್ಲಿ ನರಸಿಂಹೇಗೌಡ ಬಿನ್ ದೊಳ್ಳೇಗೌಡರನ್ನಾಗಲಿ, ಚಿಕ್ಕಣ್ಣಗೌಡ ಮತ್ತು ಇನ್ನೊಬ್ಬ ಆರೋಪಿಯನ್ನು ಸೇರಿಸಿದಂತೆ ನಾಲ್ಕು ಜನರನ್ನು ದಸ್ತಗಿರಿ ಮಾಡಿಲ್ಲ. ಇದಲ್ಲದೆ ಸ್ವಾಮಿಪೆಟ್ಟಿ, ಕಾಳಯ್ಯ, ಸೆಣ್ಣನ ಬಿನ್ ಕಾಳೇಗೌಡ, ಜಯರಾಮಗೌಡ ಒಟ್ಟು 8 ಜನರನ್ನು ಪೋಲೀಸ್‌ನವರು ದಸ್ತಗಿರಿ ಮಾಡಿಲ್ಲ ಮತ್ತು ವಿಚಾರಣೆ ಮಾಡುತ್ತಿಲ್ಲ. ಇವತ್ತು ಈ ಗ್ರಾಮದ ಜನರು ಕಂಗಾಲಾಗಿದ್ದಾರೆ. ಈ ರೀತಿ ಸಾಮೂಹಿಕವಾಗಿ ಕೊಲೆಯಾಗಿದ್ದರೂ ಸಹ ಪೋಲೀಸ್‌ನವರ ಅದಕ್ಷತೆಯಿಂದ ಯಾವ ವಿಚಾರಣೆಯನ್ನೂ ಮಾಡದೆ ಸಾಮೂಹಿಕವಾಗಿ ಕೊಲೆ ಮಾಡಿರತಕ್ಕಂಥ ಆರೋಪಿಗಳನ್ನು ದಸ್ತಗಿರಿ ಮಾಡದೇ ಇರುವುದರಿಂದ ಆ ಗ್ರಾಮದ ಜನರು ಹೌಹಾರಿದ್ದಾರೆ. ಪೋಲೀಸ್‌ನವರ ನಿಷ್ಕ್ರಿಯೆಯಿಂದಾಗಿ ಆ ಜನರು ಏನು ಮಾಡಬೇಕೆಂದು ದಿಕ್ಕು ತೋಚದೆ ಇದ್ದಾರೆ. ಆದುದರಿಂದ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು. ಈ ಒಂದು ವಿಚಾರಣೆಯನ್ನು ಪೋಲೀಸ್ ಇಲಾಖೆಯಿಂದ ಸಿ.ಒ.ಡಿ.ಗೆ ಕೊಡಬೇಕು, ಆರೋಪಿಗಳನ್ನು ಕೂಡಲೇ ದಸ್ತಗಿರಿ ಮಡಿ ಜನರಿಗೆ ಆಗಿರತಕ್ಕ ಆಘಾತವನ್ನು ದೂರ ಮಾಡಬೇಕು, ನಿಜವಾದ ನ್ಯಾಯವನ್ನು ಜನರಿಗೆ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

T ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರು ಮಾತನಾಡುವಾಗ ಯಾರನ್ನೂ ಅರೆಸ್ಟ್ ಮಾಡಿಲ್ಲವೆಂದು ಹೇಳಿದರು. ಆದರೆ 5,6,7ನೇ ಆಪಾದಿತರನ್ನು ಅರೆಸ್ಟ್ ಮಾಡಿದ್ದಾರೆ. ಮತ್ತು ಬೇಲ್ ಮೇಲೆ ಕೂಡ ಅವರನ್ನು ಬಿಟ್ಟಿದ್ದಾರೆ. ಪ್ರಮುಖವಾಗಿ ಈ ಕೇಸಿನಲ್ಲಿ ನರಸಿಂಹೇಗೌಡ ಬಿನ್ ಡುಲ್ಲೇಗೌಡ ಎನ್ನುವವನು ಏನು ಅರೆಸ್ಟ್ ಆಗಬೇಕಾಗಿತ್ತು ಅವನೇ ಹೊಡೆದ ಎಂದು ಈ ಗ್ರಾಮಸ್ಥರು ಸತ್ತುಹೋದವನ ತಂದೆಗೇ ತಿಳಿಸಿದರು, ಅವನನ್ನು ಇವತ್ತಿನವರೆಗೂ ಪೋಲೀಸರು ಅರೆಸ್ಟ್ ಮಾಡಿಲ್ಲ. ಅವನು ರಾಜಾರೋಷವಾಗಿ ತಿರುಗಾಡುತ್ತಿದ್ದಾನೆ. ಅವನು ಒಂದು

ಮನೆಗೆ ರಾತ್ರೋರಾತ್ರಿ ನುಗ್ಗಿ, ಗಂಡ, ಹೆಂಡತಿ, ಇಬ್ಬರು ಗಂಡು ಮಕ್ಕಳನ್ನು ಹೊಡೆದು ಹಾಕಿದ್ದಾನೆ. ಒಬ್ಬ ಮಗ ಆಸ್ಪತ್ರೆಯಲ್ಲಿ ಸತ್ತಿದ್ದಾನೆ, 3 ಜನ ಮನೆಯಲ್ಲೇ ಸತ್ತಿದ್ದಾರೆ. ಪಾಂಡವಪುರ ಪೋಲೀಸರಿಗೆ ಅದರ ಬಗ್ಗೆ ಗಮನವೇ ಇಲ್ಲ. ಸಪೋರ್ಟಿಂಗ್‌ನಲ್ಲಿ ಕೊಟ್ಟಿದ್ದಂಥ 4-5 ಜನ ಆಪಾದಿತರನ್ನು ಅರೆಸ್ಟ್ ಮಾಡಿ ಪ್ರಮುಖ ಆಪಾದಿತನನ್ನು ಅರೆಸ್ಟ್ ಮಾಡಿಲ್ಲ. ನಮ್ಮ ಮನೆಯಲ್ಲಿ ಒಬ್ಬ ಆಳು ಇದ್ದ, ಅವನೇ ದುರುದ್ದೇಶದಿಂದ ಆ ಕೆಲಸವನ್ನು ಮಾಡಿದ್ದಾನೆ. ಅವನನ್ನು ಅರೆಸ್ಟ್ ಮಾಡಿ ಎಂದರೆ ಅವನನ್ನೂ ಹಿಡಿದಿಲ್ಲ. ಕೇವಲ 20 ಸಾವಿರ ರೂಪಾಯಿಗಳ ವ್ಯವಹಾರಕ್ಕೋಸರ 4-5 ಜನರನ್ನು ಕೊಲೆ ಮಾಡುವುದಾದರೆ ಆ ದೇಶದಲ್ಲಿ ಜನರಿಗೆ ರಕ್ಷಣೆ ಇದೆಯೆ? ಸರ್ಕಾರದ ಆಡಳಿತ ನಡೆಯುತ್ತಿದೆಯೆ ? ಆ ಮುದುಕ ಸುಮಾರು 10-20 ಸಾರಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಬೇಡಿಕೊಂಡಿದ್ದಾನೆ. ಅವನ ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳನ್ನು ಬಿಟ್ಟರೆ ಬೇರೆ ಯಾರು ಉಳಿದಿಲ್ಲ. ಇದನ್ನು ಕೇಳುವವರು ಯಾರೂ ಇಲ್ಲ. ಬೆಂಗಳೂರು ಪಕ್ಕದಲ್ಲಿರುವ ಪಾಂಡವಪುರದಲ್ಲಿ ಇಂಥ ಘಟನೆಗಳು ನಡೆದರೂ ನಿಮ್ಮ ಪೋಲೀಸರು ಏನು ಮಾಡುತ್ತಿದ್ದಾರೆ. ಇದು ಮಾನ್ಯ ಉಪ ಮುಖ್ಯ ಮಂತ್ರಿಗಳಿಗೆ ಸೇರಿದ ಜಿಲ್ಲೆ. ಆದ್ದರಿಂದ ನನಗಿಂತ ಹೆಚ್ಚಿನ ಮಾಹಿತಿ ತಮಗೆ ಗೊತ್ತಿರಬೇಕು. ಅವರು ಯಾರ ಹತ್ತಿರ ಹೋದರೂ ರಕ್ಷಣೆ ಸಿಕ್ಕುತ್ತಿಲ್ಲ. ಬಾಯಿ ಬಿಟ್ಟರೆ ನಿನ್ನನ್ನು ಹೊಡೆದು ಹಾಕುತ್ತೇವೆ ಎನ್ನತಕ್ಕ ಪರಿಸ್ಥಿತಿಯನ್ನು ಆ ಗ್ರಾಮದಲ್ಲಿ ಉಂಟುಮಾಡಿದ್ದಾರೆ. ಇದರ ಬಗ್ಗೆ ಈ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಅಥವಾ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎಂಬುದನ್ನು ಈ ಸದನಕ್ಕೆ ತಿಳಿಸಬೇಕು. ಮತ್ತು ಅವನಿಗೆ ತಾವು ರಕ್ಷಣೆ ಕೊಡಬೇಕು. ಮಗ, ಸೊಸೆ ಇಬ್ಬರು ಮೊಮ್ಮಕ್ಕಳನ್ನು ಆತ ಕಳೆದುಕೊಂಡಿದ್ದಾನೆ. ಇನ್ನು ಎರಡು ಹೆಣ್ಣುಮಕ್ಕಳು ಮಾತ್ರ ಇವೆ. ಅವನ ವಂಶಕ್ಕೆ ವಂಶವನ್ನೇ ನಿರ್ನಾಮ ಮಾಡುವವರನ್ನು ಸರ್ಕಾರ ಹೇಗೆ ಬಿಟ್ಟಿದೆ ? ಎಲ್ಲಾದರೂ ಒಂದು ಸಣ್ಣ ಸೈಕಲ್ ಕೇಸ್‌ನಲ್ಲಿ ಯಾರನ್ನೋ ಹಿಡಿದುಕೊಂಡು ಬಂದು ಪೋಲೀಸರು ಹೊಡೆಯುತ್ತಾರೆ. ಆದರೆ ಇಂಥ ಕೇಸ್ ಬಗ್ಗೆ ನಿಮ್ಮ ಪೋಲಿಸ್ ಏನು ಮಾಡುತ್ತಿದೆ ? ಅಲ್ಲಿಯ ಸಬ್ ಇನ್ಸ್‌ಪೆಕ್ಟರ್ ಏನು ಮಾಡಿದ್ದಾರೆ, ಸರ್ಕಲ್ ಇನ್‌ಸ್ಪೆಕ್ಟರ್ ಏನು ಮಾಡಿದ್ದಾರೆಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು....

ಅಧ್ಯಕ್ಷರು : ತಾವು ಬರೆದು ಕಳುಹಿಸಬೇಕು. ಅದನ್ನು ಬಿಟ್ಟು ಸದನದಲ್ಲಿ ಹೀಗೆ ಎದ್ದುನಿಂತು ಮಾತನಾಡುತ್ತೇನೆಂದರೆ ಹೇಗೆ ?

ಶ್ರೀ ಡಿ. ಹಲಗೇಗೌಡ : ನಾನು ತಮಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಬರೆದುಕಳುಹಿಸಿದ್ದೇನೆ.

ಅಧ್ಯಕ್ಷರು : ಅದು ನನಗೆ ಬಂದಿಲ್ಲ. ನನಗೆ ಕಾಗದವನ್ನು ಬರೆದಿರುವವರಿಗೆ ಮಾತನಾಡಲು ಆಸ್ಪದ ಕೊಡುತ್ತಿದ್ದೇನೆ. ಸರ್ಕಾರದ ಪರವಾಗಿ ಯಾರಾದರೂ ಉತ್ತರ ಹೇಳುತ್ತೀರಾ ?

ಶ್ರೀ ಎಸ್.ಹೆಚ್. ಕೌಜಲಗಿ : ಸರ್ಕಾರ ಇದ್ದರೆ ಏನು ? ಕೊಲೆ ಆದರೂ ಅಲ್ಲಿ ಕೇಳುವವರಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸರ್ಕಾರಕ್ಕೆ ಕಣ್ಣಿಲ್ಲ, ಕಿವಿ ಇಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ನಾನು ಕೇಳಿಸಿಕೊಳ್ಳಲಿಲ್ಲ. ಮಾನ್ಯ ಉಪ ಮುಖ್ಯ ಮಂತ್ರಿಗಳು

ಉತ್ತರ ಹೇಳುತ್ತಾರೆಂದು ಸುಮ್ಮನಿದ್ದೆ ...

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾವು ಕೇಳಿಸಿಕೊಳ್ಳಲಿಲ್ಲ ಎಂದು ಸರ್ಕಾರ ಸತ್ಯವನ್ನೇ ಹೇಳುತ್ತಿದೆ. ಇದು ಸರ್ಕಾರಕ್ಕೆ ಕೇಳಿಸಿಲ್ಲ. ತಾ. 12-2-93ರ ಶುಕ್ರವಾರ ರಾತ್ರಿ ಪಾಂಡವಪುರ ತಾಲ್ಲೂಕು ಉಳಿಗೆರೆ ಬಿಜರಾ ಗ್ರಾಮದಲ್ಲಿ ಗಂಡ, ಹೆಂಡತಿ, ಇಬ್ಬರು ಮಕ್ಕಳು ಹೀಗೆ ಒಟ್ಟು 4 ಜನರ ಕೊಲೆಯಾಗಿದೆ ಎಂದು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದು ಸರ್ಕಾರಕ್ಕೆ ಕೇಳಿಸಲಿಲ್ಲವೆ ?

ಶ್ರೀ ಎಸ್.ಎಂ. ಕೃಷ್ಣ : (ಉಪ ಮುಖ್ಯ ಮಂತ್ರಿಗಳು) ಕೇಳಿಸಿಕೊಂಡಿದ್ದೇವೆ. ಪಾಂಡವಪುರ ತಾಲೂಕಿನ ಒಂದು ಹಳ್ಳಿಯಲ್ಲಿ 4 ಜನರ ಕೊಲೆಯಾಗಿದೆ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಸ್ಥಳೀಯ ಪೋಲೀಸರು ಕೆಲವರನ್ನು ಬಂಧಿಸಿದ್ದಾರೆಂಬ ಮಾತನ್ನು ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ನಾವು ಮಂಡ್ಯದ ಸೂಪರಿಂಟೆಂಡೆಂಟ್ ಆಫ್ ಪೋಲಿಸ್‌ಗೆ ಹೇಳಿ ಇದರ ಬಗ್ಗೆ ತೀವ್ರ ಇನ್ವೆಸ್ಟಿಗೇಷನ್ ಮಾಡಬೇಕು, ಇದರಲ್ಲಿ ಯಾರೇ ತಪ್ಪಿತಸ್ಥರು ಇರಲಿ ಅವರನ್ನು ಬಂಧಿಸಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುವಂತೆ ಆದೇಶ ಕೊಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಘಟನೆ 12ನೇ ತಾರೀಖು ಆಗಿದೆ. ಅಕ್ಯೂಸ್ಡ್ ಪರ್ಸನ್ಸ್ ....

Sri S.M. Krishna : That is left to the local police. The Superintendent of Police will look into it ....

ಯಾರು ಮೇನ್, ಯಾರು ಅಂಡರ್ ಎಂಬುದನ್ನು ಅವರು ತೀರ್ಮಾನ ಮಾಡುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : 12ನೇ ತಾರೀಖು ಕೊಲೆ ನಡೆದಿದೆ. ಇವತ್ತಿನವರೆಗೂ ಮುಖ್ಯ ಆರೋಪಿಗಳನ್ನು ಅರೆಸ್ಟ್ ಮಾಡಿಲ್ಲ.

ಶ್ರೀ ಜೆ.ಪಿ. ಮಾಧುಸ್ವಾಮಿ : ಇಂಥವನೇ ನನ್ನ ಮಗನನ್ನು ಕೊಲೆ ಮಾಡಿದ್ದಾನೆಂದು ಹೇಳಿದ ಕೂಡಲೇ ಪೋಲೀಸರು ಕ್ರಮ ತೆಗೆದುಕೊಳ್ಳಬೇಕು. ಮೆದಲು ಅವರನ್ನು ಅರೆಸ್ಟ್ ಮಾಡಲಿ, ಛಾರ್ಜ್ ಷೀಟ್ ಹಾಕುವಾಗ ಪೋಲೀಸರು ಏನು ಹೇಳುತ್ತಾರೋ ಹೇಳಲಿ. ಆರೋಪಿಯನ್ನು ಅರೆಸ್ಟ್ ಮಾಡಿಲ್ಲ, ಅವನು ತಿರುಗಾಡಿಕೊಂಡಿದ್ದಾನೆ. ಎಫ್.ಐ.ಆರ್. ಆಗಿದೆ. ಪೋಲಿಸ್‌ಗೆ ಆಫ್‌ಷನ್ ಕೊಡಬೇಕೆಂದು ತಾವು ಹೇಳಬಾರದು. ಯಾರು ಕೊಲೆ ಮಾಡಿದ್ದಾನೆ ಅವನ ವಿರುದ್ಧ ಕಂಪ್ಲೇಂಟ್ ಮಾಡಬೇಕು, ಅವನ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಅವನಿಗೆ ಆಫ್‌ಷನ್ ಕೊಡಬೇಕೆಂದು ನೀವು ಹೇಳುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : ನಾವು ಎಸ್.ಪಿ.ಗೆ ನಿರ್ದೇಶನ ಕೊಡುತ್ತೇವೆ, ಇದರ ಬಗ್ಗೆ ಸೂಕ್ತ ತನಿಖೆ ಮಾಡುವಂತೆ ಆದೇಶ ಕೊಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದೆ ಎಂಬ

ವಿವರಗಳನ್ನು ಯಾವಾಗ ಸದನಕ್ಕೆ ಹೇಳುತ್ತಾರೆ.

ಅಧ್ಯಕ್ಷರು : ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಂತ್ರಿಗಳು ಹೇಳಿದ್ದಾರಲ್ಲಾ

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೆ, ಹನ್ನೆರಡನೇ ತಾರೀಖು ರಾತ್ರಿ ಅಲ್ಲಿ 4-5 ಜನರನ್ನು ಅರೆಸ್ಟ್ ಮಾಡಿದ್ದಾರೆ. ಮತ್ತೆ ಅವರೆಲ್ಲರನ್ನು ಬೇಲ್ ಮೇಲೆ ಬಿಟ್ಟಿರುತ್ತಾರೆನ್ನುವ ವದಂತಿ ಇದೆ. ಈಗ ಅಲ್ಲಿ ಏನು ನಡೆಯುತ್ತಿದೆ ಎಂದರೆ, ಯಾವನೋ ಒಬ್ಬನ ಮನೆಯಲ್ಲಿ ಕೆಲಸ ಮಾಡುತ್ತಿರುವಂಥ ಒಬ್ಬ ಕೂಲಿ ಆಳು ಕೊಲೆಯನ್ನು ನಾನೇ ಮಾಡಿದೆ ಎಂದು ಅವನ ಕೈಯಲ್ಲಿ ಹೇಳಿಸತಕ್ಕಂಥ ಪರಿಸ್ಥಿತಿ ಉಂಟು ಮಾಡಿದ್ದಾರೆ. ಒಬ್ಬನೇ ಆಳು ನಾಲ್ಕು ಜನರನ್ನು ಹೇಗೆ ಕೊಲೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮುಂದೆ ಕೇಸ್ ಕೂಡ ಕೋರ್ಟಿಗೆ ಹೋಗುತ್ತದೆ. ಆದರೆ ನಿಜ ಸಂಗತಿಯನ್ನು ಪೋಲೀಸ್‌ನವರು ಕಂಡು ಹಿಡಿದು ಯಾರು ನಿಜವಾದ ಅಪರಾಧಿಗಳು ಎನ್ನುವುದನ್ನು ಹೇಳಬೇಕು. ಬಹುಶಃ ಈ ಪೋಲೀಸ್‌ನವರ ನಿಷ್ಕ್ರಿಯತೆ ಸಾರ್ವಜನಿಕರ ಒಂದು ಅನುಮಾನಕ್ಕೆ ಕಾರಣವಾಗಿದೆಯೆಂದು ನನಗನಿಸುತ್ತದೆ. ಸುಮಾರು 19ನೇ ತಾರೀಖಿನ ದಿವಸ ಎಸ್.ಪಿ. ಯವರನ್ನು ಸಹ ಇದಕ್ಕೆ ಸಂಬಂಧಪಟ್ಟ ಹಾಗೆ ಕೇಳಿದಾಗ, ಮಾನ್ಯ ಉಪಮುಖ್ಯ ಮಂತ್ರಿಯವರ ಮನೆಯಲ್ಲಿ ಇದನ್ನು ಹೇಳಿದರು. ಇನ್ನು ಮೂರು ದಿವಸ ಕಾಲಾವಕಾಶ ಕೊಡಿ ನಾನು ಅದನ್ನು ಅನರ್ತ್ ಮಾಡುತ್ತೇವೆಂದು ಹೇಳಿದರು. ಮೂರು ದಿವಸ ಅಲ್ಲ ಒಂದು ವಾರ ತೆಗೆದುಕೊಳ್ಳಿ, ನಿಜವಾದ ಅಪರಾಧಿಯನ್ನು ಕಂಡುಹಿಡಿಯಬೇಕೆಂದು ಹೇಳಿದರೂ ಕೂಡ ಇಲ್ಲಿಯವರೆಗೆ ಏನೂ ಕ್ರಮ ತೆಗೆದುಕೊಳ್ಳದಿರುವುದರಿಂದ ಸಾರ್ವಜನಿಕರಿಗೆ, ಸುತ್ತಮುತ್ತ ಇರತಕ್ಕಂಥವರಿಗೆ ಎಲ್ಲರಿಗೂ ಅನುಮಾನ ಬರಲು ಪ್ರಾರಂಭವಾಗಿದೆ. ಮೊನ್ನೆ ನಾಲ್ಕು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರಿಗೆ ಇದನ್ನು ಸಿ.ಓ.ಡಿ. ಗೆ ಒಪ್ಪಿಸಬೇಕೆಂದು ನಾನು ಕೂಡ ಬರೆದು ಕೊಟ್ಟಿದ್ದೇನೆ. ಅದು ಏನಾಯಿತೋ ಇನ್ನು ಕೂಡ ಗೊತ್ತಿಲ್ಲ. ದಯವಿಟ್ಟು ಅದನ್ನು ಅನರ್ತ್ ಮಾಡಬೇಕು. ಏತಕ್ಕೆಂದರೆ ಅಲ್ಲಿ ಸುತ್ತಮುತ್ತ ಇರುವ ಜನರಿಗೆ ಈಗಾಗಲೇ ಭಯ ಪ್ರಾರಂಭವಾಗಿದೆ. ಒಬ್ಬ ಹುಡುಗನಾದಂಥವನು ನಾಲ್ಕು ಜನರನ್ನು ಹೇಗೆ ಕೊಲೆ ಮಾಡಲು ಸಾಧ್ಯವಾಗುತ್ತದೆ. ಇದೆಲ್ಲವನ್ನೂ ಪೋಲೀಸಿನವರು ಮುಚ್ಚಿಹಾಕುವುದಕ್ಕೆ ಹೊರಟಿದ್ದಾರೆ ಎಂದು ಅನುಮಾನ ಬಂದಿದೆ. ಈ ಅನುಮಾನ ಪ್ರವೃತ್ತಿ ಹೋಗಬೇಕು, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವಂಥ ದೃಷ್ಟಿಯಿಂದ ಇದನ್ನು ಸಿ.ಓ,ಡಿ, ಗೆ ಒಪ್ಪಿಸಿ ನಿಜವಾದ ಅಪರಾಧಿಗಳನ್ನು ಪತ್ತೆ ಮಾಡಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಬನ್ನಿಕೋಡ್‌ರವರು, ಮಾನ್ಯ ಮಾಧುಸ್ವಾಮಿಯವರು ಸಿ.ಓ.ಡಿ. ಎನ್‌ಕ್ವರಿಯಾಗಬೇಕೆಂದು ಹೇಳುತ್ತಿದ್ದಾರೆ, ಹಾಗೆಯೇ ಆ ಕ್ಷೇತ್ರದ ಶಾಸಕರೂ ಇದನ್ನು ಸಿ.ಓ.ಡಿ. ಗೆ ಒಪ್ಪಿಸಿ ಎಂದು ಹೇಳುತ್ತಿದ್ದಾರೆ. ಆ ಒಂದು ಬೇಸಿಕ್ ರಿಸರ್ವೇಷನ್ ಇದೆ. ಆದ್ದರಿಂದ ನಾನು ಸಲಹೆ ಮಾಡತಕ್ಕಂಥದ್ದು ಏನೆಂದರೆ, ಇದು ರೆಗ್ಯುಲರ್ ಇನ್‌ವೆಸ್ಟಿಗೇಷನ್ ನಡೆಯಲಿ. ಇವತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ದೂರವಾಣಿಯ ಮುಖಾಂತರ ಕಾಂಟ್ಯಾಕ್ಟ್ ಮಾಡಿ ಅದರ ಬಗ್ಗೆ ತೀಕ್ಷ್ಣವಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಬೇಕೆಂದು ತಿಳಿಸುತ್ತೇನೆ. ಅನಂತರ ಅದರ ಫಲಶ್ರುತಿ ಏನಾಗುತ್ತದೆನ್ನುವುದನ್ನು ಕಾದು ನೋಡೋಣ.

ಡಾ. ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಕ್ರಿಕೆಟ್ ಸಂಸ್ಥೆ ಬಗ್ಗೆ ಮೊನ್ನೆ ಕ್ರಿಕೆಟ್ ಮ್ಯಾಚ್ ನಡೆದಂಥ ಕಾಲದಲ್ಲಿ ನಡೆದ ಅನಾಹುತದ ಬಗ್ಗೆ ಟಿಕೆಟ್ ದೊರಕದ ಬಗ್ಗೆ

ಮತ್ತು ಸಂಸ್ಥೆಯ ಬಗ್ಗೆ ಒಂದು ಸಿ.ಓ.ಡಿ. ಎನ್‌ಕ್ವೈರಿ ನಡೆಯುತ್ತಿದೆ. ಅತ್ಯಂತ ವಿಶ್ವಾಸ ಪೂರ್ವಕವಾಗಿ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ನಾನು ಈ ರಾಜ್ಯದ ಕ್ರೀಡಾ ಮಂತ್ರಿಯಾಗಿ ಸ್ವಲ್ಪ ದಿವಸ ಕೆಲಸ ಮಾಡಿದ್ದೇನೆ. ಹಲವಾರು ಸಂಘ ಸಂಸ್ಥೆಗಳ ಪರಿಚಯ ನನಗಿದೆ. ಈ ಸರ್ಕಾರದವರು ಧಾರಾಳವಾಗಿ ನಿವೇಶನಗಳನ್ನು ಹಲವಾರು ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಆದರೆ ರಾಜ್ಯದ ಕ್ರಿಕೆಟ್ ಸಂಸ್ಥೆಗೆ ಮತ್ತು ಟೆನ್ನಿಸ್ ಅಸೋಷಿಯೇಷನ್ ಇವರೆಡಕ್ಕೂ ನಿವೇಶನಗಳನ್ನು ಕೊಟ್ಟಿದ್ದನ್ನು ಪೂರ್ಣವಾಗಿ ಸದುಪಯೋಗಪಡಿಸಿಕೊಂಡು ರಾಷ್ಟ್ರ ಹೆಮ್ಮೆಪಡುವಂಥ ಒಂದು ಸಂಸ್ಥೆಯನ್ನಾಗಿ ಪರಿವರ್ತನೆ ಮಾಡಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಿದ್ದಾರೆ. ತಮಗೆ ಗೊತ್ತಿದೆ, ಕಳೆದ 5-6 ವರ್ಷಗಳಿಂದ ಯಾವುದೇ ಇಂಟರ್‌ನ್ಯಾಷನಲ್ ಮ್ಯಾಚ್ ಇಲ್ಲಿ ಆಗಲಿಲ್ಲ. ಮೊನ್ನೆ ನಡೆದಾಗ 5-6 ವರ್ಷಗಳ ನಂತರದಲ್ಲಿ ನಡೆದದ್ದರಿಂದ ಬಹಳಷ್ಟು ಉತ್ಸಾಹ ಜನರಲ್ಲಿ ಇದ್ದು, ಕ್ರಿಕೆಟ್ ಮ್ಯಾಚ್‌ನ ಟಿಕೆಟ್ಸ್ ಮಾರಾಟವಾಯಿತು. ಆದರೆ ಸಾಧಾರಣವಾಗಿ ಮೂರು ಸಾವಿರ ಜನ ಮೆಂಬರ್ಸ್ ಇರುವ ಈ ಸಂಸ್ಥೆಗೆ ಮೂರು ಸಾವಿರ ಜನ ಮೆಂಬರ್ಸ್‌ಗೆ ಒಬ್ಬರಿಗೆ 10-10 ಟಿಕೆಟ್ ಕೊಟ್ಟರೂ ಕೂಡ 30 ಸಾವಿರ ಆಗುತ್ತದೆ. ಆದ್ದರಿಂದ ಅಲ್ಲಿ ಡೂಪ್ಲಿಕೇಟ್ ಟಿಕೆಟ್ಸ್ ಬೇಕಾದಷ್ಟು ನಡೆಯಿತು. ಪಾಸಸ್ ಬಗ್ಗೆಯೂ ನನಗೆ ಗೊತ್ತಿದೆ. ನಾನು ಒಬ್ಬ ಶಾಸಕನಾಗಿ ಹಿಂದಿನ ಕ್ರೀಡಾ ಮಂತ್ರಿಯಾಗಿ ಅವರ ಮೇಲೆ ಎಷ್ಟು ಪ್ರಭಾವ, ಒತ್ತಾಯ ಮಾಡಿದ್ದೇನೆಂದರೆ, ಏತಕ್ಕೆಂದರೆ ಏನೋ ಒಂದು ಪಾಸ್ ಕೊಡಿಸಿ ಎಂದು ಶಾಸಕರು ಕೇಳುತ್ತಾರೆ, ಮಿತ್ರರು ಕೇಳುತ್ತಾರೆ. ಆದರೆ ಇದು ಯಾವ ವ್ಯವಸ್ಥೆಯಲ್ಲಿ ಇದ್ದರು ಎಂದರೆ ನೋಬಲಿ ಶಾಸಕ ಮಿತ್ರರ ಹತ್ತಿರ ಮತ್ತು ಮಂತ್ರಿಗಳ ಹತ್ತಿರ ನನ್ನ ಮನವಿ ಎಂದರೆ, ಪೆವಲಿಯನ್‌ನಲ್ಲಿ ಸುಮಾರು ಎರಡು ಸಾವಿರ ಕ್ಯಪ್ಯಾಸಿಟಿ ಇದ್ದರೆ, ಸುಮಾರು 700 ಪಾಸ್‌ಗಳನ್ನು ಶಾಸಕರಿಗೆ ಕೊಟ್ಟಿದ್ದಾರೆ. ಒಂದು ವೇಳೆ ಡೂಪ್ಲಿಕೇಟ್ ಆಗಿದ್ದರೆ it must be purely the responsiblity of the police to investigate it. ಡೂಪ್ಲಿಕೇಟ್ ಟಿಕೆಟ್ಸ್ ಆಗಿದೆ ಎಂದು ಹಿಂದೆ ಕೆಂಪ್ಲೇಂಟ್ ಆಗಿದೆ. ಇವತ್ತು ಸಿ.ಓ.ಡಿ. ಎನ್‌ಕ್ವೈರಿ ಮಾಡಿ ಅಲ್ಲಿ ಕರ್ನಾಟಕ ರಾಜ್ಯದ ಕ್ರಿಕೆಟ್ ಸಂಸ್ಥೆಯ ಅಧಿಕಾರಿ ವರ್ಗದಲ್ಲಿರತಕ್ಕಂಥ ಶ್ರೇಷ್ಠವಕ್ತಾರರು, ನಾನು ಅವರ ಹೆಸರನ್ನು ಹೇಳಿದರೆ ತಪ್ಪಾಗಲಾರದು. ಶ್ರೀ ಚಿನ್ನಸ್ವಾಮಿಯವರು, ಶ್ರೀ ನಾಗರಾಜ್‌ರವರು ಡಾ. ತಿಮ್ಮಪ್ಪಯ್ಯನವರು. ಇವರೆಲ್ಲರೂ ಸುಮಾರು 50-60 ವರ್ಷಗಳ ಕಾಲ ಕ್ರಿಕೆಟ್ ಸಂಸ್ಥೆಗೋಸ್ಕರ, ಕ್ರಿಕೆಟ್ ಕ್ರೀಡೆಗೋಸ್ಕರ ದುಡಿದ ವ್ಯಕ್ತಿಗಳು. ಇವತ್ತು ಕರ್ನಾಟಕ ಹೆಮ್ಮೆಪಡುವಂತಹ ಒಂದು ಕ್ರೀಡಾಂಗಣವನ್ನು ಮಾಡಿದ್ದಾರೆ. ಆದರೆ ಇವತ್ತು ಅವರ ಮೇಲೆ ಸಿಒಡಿ. ಎನ್‌ಕ್ವರಿ ಮಾಡುವುದು ಸರಿಯಲ್ಲ. ಏನೋ ಪಾಸ್ ಕೇಳಿದರು, ಕೊಟ್ಟಿದ್ದಾರೆ, ಇದೆಲ್ಲ ನಡೆಯುತ್ತದೆ. ಪೊಲೀಸರದ್ದು ತಪ್ಪಲ್ಲ. 4 ಪಾಸ್ ತೆಗೆದುಕೊಂಡು ಬಾ ಎಂದು ನಾವೇ ಹೇಳುತ್ತೇವೆ. ಆದರೆ ಅಲ್ಲಿ ನಡೆದಂತಹ ವ್ಯವಸ್ಥೆಯಲ್ಲಿ ಒಂದು ದಿವಸ ಏನೋ ತಪ್ಪಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ವ್ಯವಸ್ಥೆಯಲ್ಲಿ ಶ್ರೀ ನಾಗರಾಜು ಅವರು ಅತ್ಯಂತ ಹೆಸರು ಪಡೆದಂಥ ಒಬ್ಬ ವಯೋವೃದ್ಧರು ಅವರು ಕೆಲಸ ಮಾಡುತ್ತಿದ್ದಾರೆ, ದುಡಿಯುತ್ತಿದ್ದಾರೆ. ಈ ಒಂದು ಕ್ರೀಡೆಗೋಸ್ಕರ ಹೆಚ್ಚಿನ ಸೇವೆ ಸಲ್ಲಿಸಿದಂಥ ಈ ವ್ಯಕ್ತಿಗೆ ಬಹಳ ಹೆರಾಸ್‌ಮೆಂಟ್ ನಡೆಯುತ್ತಿದೆ. ಆದುದರಿಂದ ಮುಖ್ಯ ಮಂತ್ರಿಗಳ ಹತ್ತಿರ emotionally we would have spoken. ನಾವು ಸಭೆಯಲ್ಲಿ ಕ್ರಿಕೆಟ್ ಪಾಸ್ ಸಿಕ್ಕಲ್ಲವೆಂದು ಮಾತನಾಡಬಹುದಿತ್ತು, ಆದರೆ ಎಲ್ಲಿ ಕೊಡಬಹುದು, ಎಷ್ಟು ಜನರಿಗೆ ಕೊಡಬಹುದು? ಡೂಪ್ಲಿಕೇಟ್ ಆಗಿರುವುದು That is a different matter altogether. That could be totally inversigated. ಆದರೆ ಸಿಒಡಿ. ಎನ್‌ಕ್ವರಿಗೆ ಆರ್ಡರ್ ಮಾಡಿದ್ದೀರಿ. ನಮ್ಮ ಕೋ-ಆಪರೇಟೀವ್

ಸೊಸೈಟೀಸ್, ನಮ್ಮ ನಮ್ಮ ಸಂಸ್ಥೆಗಳನ್ನು ನಮಗೆ ನೋಡುವುದಕ್ಕಾಗುವುದಿಲ್ಲ. ಮಾನ್ಯ ರಾಜಶೇಖರ ಮೂರ್ತಿಯವರು ಇದ್ದರೆ ಕೇಳುತ್ತಿದ್ದೆ. Where was the urgency? An organisation which has efficiently worked and shown results .- ಈಗ ಫುಟಬಾಲ್ ಸಂಸ್ಥೆ ಇದೆ. ನನ್ನ ತಲೆಮೇಲೆ ದೋಷ ಇಟ್ಟುಕೊಂಡು ಅವರಿಗೆ ಜಾಗ ಮಾಡಲಿಕ್ಕೆ, ಸಬ್‌ಲೀಸ್ ಮಾಡಲಿಕ್ಕೆ ಕೊಟ್ಟರೂ ಅವರು ಮಾಡಲಿಲ್ಲ. ಅದರ ಬಗ್ಗೆ ವಿಚಾರಣೆ ಮಾಡಿ. People who have failed and organisations which have failed, in respect of whch you can order for an enquiry, ಆದರೆ ಈ ತರಹ ಸಿಒಡಿ. ಎನ್‌ಕ್ವರಿ ಮಾಡಿ ಅದಕ್ಕೆ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳನ್ನು ಹೆರಾಸ್‌ಮೆಂಟ್ ಮಾಡುವ ವ್ಯವಸ್ಥೆಯನ್ನು ನಿಲ್ಲಿಸಿ. ಅವರ ಗೌರವಕ್ಕೆ ಏನೂ ಕುಂದು ಬರಬಾರದು. ಏಕೆಂದರೆ ನಾಗರಾಜ್ ಅವರಾಗಲಿ, ತಿಮ್ಮಪ್ಪಯ್ಯನವರಾಗಲಿ, ಅವರ ವ್ಯಕ್ತಿತ್ವ ಅಂಥದ್ದು. ಅವರು ಚಿಲ್ಲರೆ ಕಾಸು ಮಾಡಿ ವ್ಯವಹಾರ ಮಾಡಬೇಕೆಂದು ಇಲ್ಲ. ಹತ್ತಿಪ್ಪತ್ತು ಪಾಸುಗಳನ್ನು ಜಾಸ್ತಿ ಕೊಟ್ಟಿರಬಹುದು. ಅದರ ಬಗ್ಗೆ ಮುಖ್ಯ ಮಂತ್ರಿಗಳು ಗಮನ ಕೊಟ್ಟು ಸಿಒಡಿ ಎನ್‌ಕ್ವರಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಯಾರಾದರೂ ಜೀಮಾನವೆಲ್ಲ ಮುಡುಪಾಗಿಟ್ಟು ಇಂತಹ ಸಂಸ್ಥೆಗಳನ್ನು ಕಟ್ಟಬೇಕಾಗುತ್ತದೆ, ಬೆಳಸಬೇಕಾಗುತ್ತದೆ. ಸರ್ಕಾರದವರು ತಪ್ಪು ತಿಳಿದುಕೊಳ್ಳದೆ ಹೋದರೆ ಹೇಳುತ್ತೇನೆ. ಇದರಲ್ಲಿ ಸರ್ಕಾರದ ಕಾಣಿಕೆ ಅತ್ಯಲ್ಪ. ಕ್ರಿಕೆಟ್ ಅಸೋಷಿಯೇಷನ್ ಬೆಳಸಿರುವ ಕಡೆ ಸರ್ಕಾರ ಏನು ಮಾಡಿದೆ ಎಂದರೆ, ಲ್ಯಾಂಡ್ ಕೊಟ್ಟಿರುವುದು ಬಿಟ್ಟರೆ ಇಡೀ ಅಸೋಷಿಯೆಷನ್ ಸದಸ್ಯತ್ವದ ಮೇಲೆ ಮತ್ತು ಮುಂಚೂಣಿಯಲ್ಲಿರುವ ನಾಯಕತ್ವದ ಮೇಲೆ ಬೆಳೆದಿದು ನಿಂತಿರುತ್ತದೆ. ಒಂದು ಒಳ್ಳೆಯ ಮ್ಯಾಚ್ ನಡೆಯುತ್ತದೆ, ಅಲಲ್ಲಿ ಅನ್‌ಪ್ರಿಸಿಡೆಂಟೆಡ್ ರಷ್ ಆಗುತ್ತದೆ, ಸೀರಿಯಸ್ ಆಗಿ ಗೆದ್ದಿರುವ ಟೀಂ ಬಂದು ನಮ್ಮ ಪರವಾಗಿ ಆಡುತ್ತದೆ ಎಂದಾಗ ಜನರು ನುಗ್ಗುತ್ತಾರೆ, ಮತ್ತೊಂದು ಮಗದೊಂದು ಆಗುತ್ತದೆ. ನನಗೆ ಇರುವ ಇನ್ರಫಾರ್ಮೇಷನ್ ಪ್ರಕಾರ ಸದಸ್ಯರಿಗೆ ಇವರು 4 ದಿವಸ ಮೊದಲೇ 4-4 ಟಿಕೆಟ್‌ಗಳನ್ನು ಕೊಟ್ಟುಬಿಟ್ಟಿದ್ದರು, ಮತ್ತು 8-9 ದಿನಗಳ ಮೊದಲೆ ಡೆಲ್ಲಿ ಬೇಸ್ ಆದ ಯಾವುದೋ ಟಿಕೆಟ್ ಇಲ್ಲಿ ಮಾರಾಟವಾಗಿತ್ತು. ಅವರು ಪೋಲೀಸರನ್ನು ರಿಕ್ವೆಸ್ಟ್ ಮಾಡುತ್ತಾರೆ, ಪಾಸ್ ಹೋಲ್ಡರ್ಸ್ ಅನ್ನು ಅಥವಾ ಟಿಕೆಟ್ ಹೋಲಲ್ಡರ್ಸ್ ಅನ್ನು ಒಳಗೆ ಬಿಡಿ, ಎಲ್ಲರಿಗೂ ಲಾಠಿ ಚಾರ್ಜ್ ಮಾಡಬೇಡಿ, ಇಲ್ಲಿ ಬಂದಿರುವ ಗೌರವಸ್ಥರಿಗೆ ಹೊಡೆಯಬೇಡಿ ಅಂದರೆ ಪೊಲೀಸರು ಯಾರನ್ನೂ ಕೇಳುವ ಹಾಗೆ ಇಲ್ಲ 2 ಮತ್ತು 4ನೇ ಗೇಟಿಗೆ ಹೋದವರಿಗೆ ಹಿಗ್ಗಾಮುಗ್ಗಾಗಿ ಹೊಡೆದು ಕಳುಹಿಸುತ್ತಾರೆ. ಜೊತೆಗೆ ಏನಾಗುತ್ತದೆಂದರೆ, ಇವರು ಹೇಳಿದವರಿಗೆಲ್ಲ ಪಾಸ್ ಕೊಡಬೇಕು. ಅಲ್ಲಿ ಒಬ್ಬ ಹೋಂ ಗಾರ್ಡ್ ಕೇಳಿದರೆ ಪಾಸ್ ಕೊಡಬೇಕು, ಒಬ್ಬ ಪಿ.ಸಿ. ಕೇಳಿದರೆ ಪಾಸ್ ಕೊಡಬೇಕು, ಅಲ್ಲಿ ಓಡಾಡುವ ಎಲ್ಲಾ ಅಧಿಕಾರಿಗಳಿಗೆ ಪಾಸ್ ಕೊಡಬೇಕು. ಈ ರೀತಿಯಾದರೆ ಅಸೋಷಿಯೇಷನ್‌ಗಳನ್ನು ಸ್ವಾಯತ್ತ ಸಂಸ್ಥೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಅದಕ್ಕೆ ಈಗ ದಿಡೀರ್‌ನೆ ಅವರ ಕುತ್ತಿಗೆ ಹಿಸುಕಿ ಹಾಕುತ್ತೇವೆ ಅವರು ಮಾಡುವುದೆಲ್ಲ ತಪ್ಪು ಅವರ ಮೇಲೆ ಎನ್‌ಕ್ವರಿ ಆಗುತ್ತದೆ, ಅವರು ಹಣವನ್ನು ವಾಪಸ್ಸು ಕೊಟ್ಟದ್ದು ಏತಕ್ಕೆ ಎಂದರೆ, ಜೆನ್ಯುಯನ್ ಟಿಕೆಟ್ ಹೋಲ್ಡರ್ಸ್‌ಗೆ ಹಣ ವಾಪಸ್ಸು ಕೊಡುವುದು ತಪ್ಪೆ ಈ ದೇಶದಲ್ಲಿ, ಅವರು ಮಾಡಿರುವ ಮಹಾ ತಪ್ಪು ಇವತ್ತು ಇವರು ಚಾರ್ಜ್ ಮಾಡಿರುವುದನ್ನು ಎಂದರೆ, ನೀವು ಅವರಿಗೆ ಟಿಕೆಟ್ ಹಣ ವಾಪಸ್ಸು ಕೊಡುತ್ತಿದ್ದೀರಿ. ಅದು 6 ಲಕ್ಷ ರೂಪಾಯಿ ಆಗುತ್ತದೆಂದು

ಇವರು ಹೇಳಿದ್ದಾರೆ. ಹಾಗಾದರೆ ಯಾರೋ ಜೆನ್ಯುಯನ್ ಟಿಕೆಟ್ ಇಟ್ಟುಕೊಂಡಿದ್ದ ಒಬ್ಬ ಗೌರವಸ್ಥ ಪೊಲೀಸರ ಏಟಿಗೆ ಹೆದರಿಕೊಂಡು ಮನೆಗೆ ಹೋದವನು ಬಂದು ನನಗೆ ಹೀಗಾಯಿತು ಎಂದಿದ್ದಕ್ಕೆ ಹಣ ವಾಪಸ್ಸು ಕೊಟ್ಟರೆ ಅದನ್ನೇ ಚಾರ್ಜ್ ಮಾಡಿ, ಇವತ್ತು ಆ ಸಂಸ್ಥೆಯನ್ನು ಸರ್ಕಾರದ ಸ್ವಾಮ್ಯಕ್ಕೆ ತೆಗೆದುಕೊಳ್ಳುವುದಕ್ಕೆ ಹೊರಟಿರುವುದು ತಪ್ಪು. ಇದು ಆಗಬಾರದು. ಯಾವುದೇ ಸಂಸ್ಥೆಗಳಿಗೆ ನಾವು ಪೂರಕವಾಗಿ ನಿಲ್ಲಬೇಕು, ನಮ್ಮ ಕೈಲದ ಬೆಂಬಲ ಕೊಡುವುದಕ್ಕೆ ನಿಲ್ಲಬೇಕು. ಅದು ಬಿಟ್ಟು ಅಂಥ ಕೃತ್ಯಗಳನ್ನು ಮಾಡಬಾರದು. ತಮಗೆ ಅದರ ಮೇಲೆ ನಿಜವಾಗಿ ಆಸಕ್ತಿ ಇದ್ದರೆ ಏನ್‌ಕ್ವರಿ ಮಾಡಿ. ಯಾರು ತಪ್ಪು ಮಾಡಿದ್ದಾರೆ, ಬಿಟ್ಟಿದ್ದಾರೆಂಬುದು ಎನ್‌ಕ್ವರಿ ಮಾಡಿದ ಮೇಲೆ ಗೊತ್ತಾಗುತ್ತದೆ. ಅಲ್ಲಿರುವ ಕಾರ್ಯದರ್ಶಿಗಳ ಮೇಲೆ, ಅಧ್ಯಕ್ಷರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಇವತ್ತು ಒಂದು ಮಾತು ಹೇಳುತ್ತೇನೆ. ಆ ಕಾರ್ಯದರ್ಶಿ ಆಲ್ ಇಂಡಿಯ ಕ್ರಿಕೆಟ್ ಅಸೋಷಿಯೇಷನ್ ಸೆಕ್ರೆಟರಿ ಕೂಡ ಆಗಿದ್ದಾರೆ. ಆ ಮಟ್ಟಕ್ಕೆ ಬೆಳೆದವರನ್ನು ಏಕಾಏಕಿ ಮಾನಭಂಗ ಮಾಡಿ ಬಯಲಲ್ಲಿ ನಿಲ್ಲಿಸುವ ಕೃತ್ಯ ಆಗಬಾರದು. ಈ ಸರ್ಕಾರ ಏನಾದರೂ ಇಂಥ ಕೆಲಸ ಮಾಡುವುದಕ್ಕೆ ಹೊರೆಟಿದ್ದರೆ ದಯಮಾಡಿ ಇದನ್ನು ಕೈಬಿಡಬೇಕು. ಇದರಲ್ಲಿ ಯಾವದೇ ಪಕ್ಷ, ಪರ ಪಕ್ಷ ಎಂಬ ಪ್ರಶ್ನೆ ಇಲ್ಲ. ಅದನ್ನೆಲ್ಲ ಕೈಬಿಟ್ಟು ನೇರವಾಗಿ ವಿಚಾರಣೆ ಮಾಡಿಸಬೇಕೆಂದು ಕೇಳಿಕೊಂಡು, ಅಸೋಷಿಯೇಷನ್ ಸೂಪರ್‌ಸೀಡ್ ಮಾಡುವ ಮೂವ್ ಏನಾದರೂ ಇದ್ದರೆ ದಯವಿಟ್ಟು ಕೈಬಿಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪ್ರಸ್ತಾಪವನ್ನು ಇಲ್ಲಿ ತರಬೇಕೆಂದು ಉದ್ದೇಶ ನಮಗಂತೂ ಇರಲಿಲ್ಲ. ಈ ಕ್ರಿಕೆಟ್ ಮಂಡಲಿಯ ಆಗುಹೋಗುಗಳ ಮತ್ತು ಅದರ ಪರಿಸ್ಥಿತಿಯನ್ನು ನಾನು ಬಹಳ ದಿವಸಗಳಿಂದ ಗಮನಿಸಿದ್ದೇನೆ. ಇದಕ್ಕೆ ಸುಮಾರು 50 ವರ್ಷಗಳ ಇತಿಹಾಸ ಇದೆ. ಮೊದಲು ಕ್ರಿಕೆಟ್ ನಡೆಯುತ್ತಾ ಇದ್ದುದು ಸೆಂಟ್ರಲ್ ಕಾಲೇಜಿನ ಎದುರುಗಡೆ ಒಂದು ಸಣ್ಣ ಮೈದಾನದಲ್ಲಿ. ಆ ಆಟವನ್ನು ಒಂದು ವಿಶ್ವದ ಮಟ್ಟಕ್ಕೆ, ಅಂತರರಾಷ್ಟ್ರೀಯ ಮಟ್ಟಕ್ಕೆ ಆವತ್ತು ತರಬೇಕಾದ ದಿಗ್ಗಜರು ಬಹಳ ಜನರು. ಇದರಲ್ಲಿ ಅನೇಕ ಜನರು ದುಡಿದಿದ್ದಾರೆ. ಒಂದು ಕಾಲದಲ್ಲಿ ಈ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಜೆ.ಬಿ. ಮಲ್ಲಾರಾಧ್ಯರು ಅದರ ಅಧ್ಯಕ್ಷರಾಗಿದ್ದರು. ಇವತ್ತು ಚಿನ್ನಸ್ವಾಮಿಯವರಿಗೆ ನಾವು ಈ ಸದನದಲ್ಲಿ ಗೌರವವನ್ನು ಸಲ್ಲಿಸಬೇಕು. ಈ ಒಂದು ಸಂಸ್ಥೆಯ ಏಳಿಗೆಗಾಗಿ ಚಿನ್ನಸ್ವಾಮಿಯವರು ಮತ್ತು ಈ ಸಂಸ್ಥೆ ಕಾರ್ಯದರ್ಶಿ ಆಗಿರತಕ್ಕವರು ಮತ್ತು ಈಗ ಅಖಿಲ ಭಾರತ ಕ್ರಿಕೆಟ್ ಮಂಡಲಿಯ ಕಾರ್ಯದರ್ಶಿ ಆಗಿರತಕ್ಕವರು ಮತ್ತು ಈಗ ಅಖಿಲ ಭಾರತ ಕ್ರಿಕೆಟ್ ಮಂಡಲಿಯ ಕಾರ್ಯದರ್ಶಿಗಳಾಗಿರುವ ಸಿ. ನಾಗರಾಜ್ ಅವರು ಸತತವಾಗಿ ಶ್ರಮವಹಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ಕರ್ನಾಟಕದ ವ್ಯಕ್ತಿ ಅಖಿಲ ಭಾರತ ಕ್ರಿಕೆಟ್ ಮಂಡಲಿಯ ಕಾರ್ಯದರ್ಶಿಗಳಾಗಿದ್ದಾರೆ. ಅದಕ್ಕೆ ಮಾಧವರಾವ್ ಸಿಂಧ್ಯಾ ಅವರು ಅಧ್ಯಕ್ಷರಾಗಿದ್ದಾರೆ. ಈ ಕ್ರಿಕೆಟ್ ಮಂಡಳಿಯ ನಂಟು ನಮ್ಮ ರಾಜ್ಯದ ಬಹುತೇಕ ರಾಜಕಾರಣಿಗಳಿಗೆ ಇದೆ. ಆ ಕ್ರಿಕೆಟ್ ಮಂಡಳಿಯ ಬಗ್ಗೆ ರಾಮಕೃಷ್ಣ ಹೆಗ್ಡೆಯವರು ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದಾರೆ. ಹಾಗೆಯೇ ವೀರೇಂದ್ರ ಪಾಲೀಟರು, ನಿಜಲಿಂಗಪ್ಪನವರೂ ಗೌರವ ಇಟ್ಟುಕೊಂಡಿದ್ದಾರೆ. ಈ ಕ್ರಿಕೆಟ್ ಮಂಡಲಿಗೆ ಆ ಜಾಗವನ್ನು ಕೊಟ್ಟವರೇ ನಿಜಲಿಂಗಪ್ಪನವರು. ಮೊಯ್ಲಿಯವರೂ ಅಪಾರ ಗೌರವವನ್ನು ಇಟ್ಟುಕೆಂಡಿದ್ದಾರೆ. ಹಾಗೆಯೇ ಬಂಗಾರಪ್ಪನವರೂ ಗೌರವವನ್ನು ಇಟ್ಟುಕೊಂಡಿದ್ದಾರೆ. ಇವತ್ತು ಕ್ರಿಕೆಟ್‌ನಲ್ಲಿ ಟೆಸ್ಟ್ ಮ್ಯಾಚ್‌ಗಳು ಕರ್ನಾಟಕಕ್ಕೆ ಬರಬೇಕಾದರೆ ಅಷ್ಟು ಸುಲಭ ಅಲ್ಲ. ಕರ್ನಾಟಕದಲ್ಲಿ ಟೆಸ್ ಮ್ಯಾಚ್ ನಡೆಯಬೇಕಾದರೆ ಅದಕ್ಕೆ

ಒಂದು ಶಕ್ತಿ ಬೆಕು. ಆ ಶಕ್ತಿಯ ಪ್ರದರ್ಶನವನ್ನು ಸಿ. ನಾಗರಾಜ್ ಅವರು ಮಾಡಿದ್ದಾರೆ. ಇವತ್ತು ಸಿ. ನಾಗರಾಜ್ ಅವರು ಅಖಿಲ ಭಾರತ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಅವರು ಮೆದಲಿನಿಂದಲೂ ಜಾಯಿಂಟ್ ಸೆಕ್ರೆಟರಿ ಆಗಿದ್ದರು. ಅವರನ್ನು ಕಾರ್ಯದರ್ಶಿ ಮಟ್ಟಕ್ಕೆ ತರಬಾರದು ಎಂದು ಹೇಳಿ ಯುದ್ಧ ನಡೆಯಿತು. ಅವರು ಹೋರಾಟ ಮಾಡಿ ಮತದಾನದಲ್ಲಿ ಗೆದ್ದು ಅಖಿಲ ಭಾರತ ಕ್ರಿಕೆಟ್ ಮಂಡಲಿಯ ಕಾರ್ಯದರ್ಶಿಗಳಾಗಿದ್ದಾರೆ. ಮೊನ್ನೆ ನಡೆದಂಥ ಟೆಸ್ಟ್ ಮ್ಯಾಚ್‌ನಲ್ಲಿ ಕೆಲವು ಆಚಾತುರ್ಯಗಳಾಗಿರಬಹುದು. ಇಂತಹವು ಮೊದಲೂ ನಡೆದಿದೆ. ಇದಕ್ಕೆ ಕಾರಣ ಏನು? ಕೇವಲ ಕರ್ನಾಟಕದಲ್ಲಿ ಮಾತ್ರ ಆಗಿಲ್ಲ. ಭಾರತ ದೇಶದಲ್ಲಿ ಎಲ್ಲೆಲ್ಲಿ ಟೆಸ್ಟ್ ಮ್ಯಾಚ್ ನಡೆದಿದೆ ಅಲ್ಲೆಲ್ಲಾ ಕಡೆ ಇದು ನಡೆದಿದೆ. ಆ ರೀತಿ ಸ್ವಲ್ಪ ಅಚಾತುರ್ಯ ನಡೆದಿರುವುದು ಕರ್ನಾಟಕದಲ್ಲಿ ಪ್ರಥಮ. ನಾನು ತಮಗೆ ಹೇಳುತ್ತಿದ್ದೇನೆ. ಇಂತಹ ಒಂದು ಆಟದ ವ್ಯವಸ್ಥೆ ಮಾಡುವಾಗ, ಅವರು ಯಾರು ಇದ್ದಾರೆ ತೀರಾ ಅವರ ಬಗ್ಗೆ ಯಾವುದೇ ಒಂದು ಆರೋಪಣೆ ಮಾಡುವುದಲ್ಲ. ಅಲ್ಲಿ ಎಂತೆಂತಹವರು ಇದ್ದಾರೆ. ಸುಮಾರು 300 ಜನ ಸಮಿತಿ ಸದಸ್ಯರು ಇದ್ದಾರೆ. ಬಹಳ ಉನ್ನತ ಮಟ್ಟದವರು ಇದ್ದಾರೆ. ಅನೇಕ ಜನ ಟೆಸ್ಟ್ ಆಟಗಾರರು ಇದ್ದಾರೆ. ವಿಶ್ವದಲ್ಲೇ ಕೀರ್ತಿ ಪಡೆದ ಟೆಸ್ಟ್ ಆಟಗಾರ ಜಿ.ಆರ್. ವಿಶ್ವನಾಥ್ ಅದರ ಸದಸ್ಯರು ಅದೇ ಪ್ರಕಾರ ಚಂದ್ರಶೇಖರ್, ಪ್ರಸನ್ನ ಅವರು ವಿಶ್ವಕೀರ್ತಿ ಪಡೆದವರು ಈ ಸಂಸ್ಥೆಯ ಸದಸ್ಯರು. ಇವರನ್ನೆಲ್ಲಾ ಮೇಲೆ ತರಲು ಸಿ. ನಾಗರಾಜ್ ಅವರೇ ಕಾರಣ. ಅವರ ಆ ವ್ಯಕ್ತಿತ್ವದಿಂದ ಅವರನ್ನು ತಂದರು. ಆ ಸಂಸ್ಥೆಯಲ್ಲಿ ನಿವೃತ್ತಿ ಡೈರೆಕ್ಟರ್ ಜನರಲ್ ಇದ್ದಾರೆ. ಆದ್ದರಿಂದ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡುತ್ತೇನೆ. ಇದು ಒಂದು ಒಳ್ಳೆಯ ಹೆಚ್ಚಿನ ಹೆಸರು ಪಡೆದಿರತಕ್ಕ ಉತ್ತಮ ಸಂಸ್ಥೆ. ಈ ಸಂಸ್ಥೆಗೆ ಕಳಂಕ ತರತಕ್ಕ ವ್ಯವಸ್ಥೆಯಲ್ಲಿ ಸರ್ಕಾರ ಕೈ ಹಾಕಬಾರದು. ಸರ್ಕಾರ ಇವತ್ತು ಇಂತಹ ಸಂಸ್ಥೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಸರ್ಕಾರ ಇದಕ್ಕೆ ಕೊಟ್ಟಿರತಕ್ಕ ಹಣ ಎಷ್ಟು? ಕಾರ್ಪೊರೇಷನ್‌ನವರು ಕೊಟ್ಟಿರುವ ಹಣ ಎಷ್ಟು? ಇವತ್ತು ಏನು ಪಿತೂರಿ ನಡೆಯುತ್ತಿದೆ ಅದಕ್ಕೆ ಅವಕಾಶ ಕೊಡಬಾರದು. ಇಂತಹ ಸಂಸ್ಥೆಗೆ ಕೆಟ್ಟ ಹೆಸರು ತರುವ ವ್ಯವಸ್ಥಿತವಾದ ಪಿತೂರಿ ನಡೆಯುತ್ತಿದೆ. ಅದಕ್ಕೆ ಅವಕಾಶ ಕೊಡಬಾರದು. ಇಂತಹ ಸಂಸ್ಥೆಗೆ ಕೆಟ್ಟ ಹೆಸರು ತರುವ ವ್ಯವಸ್ಥಿಥವಾದ ಪಿತೂರಿ ನಡೆದಿದೆ. ಸರ್ಕಾರ ಈ ಎಚ್ಚರಿಕೆಯನ್ನು ಗಮನಿಸಿ ಕೆಟ್ಟ ಸಂಪ್ರದಾಯಕ್ಕೆ ಕೈ ಹಾಕಬಾರದು ಎಂದು ಹೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಸುಮಾರು 50 ವರ್ಷಗಳಿಂದ ಈ ಸಂಸ್ಥೆ ನನಗೆ ಪರಿಚಯ ಇದೆ. ಡಾ : ಜೀವರಾಜ ಆಳ್ವ ಅವರು ಹೇಳಿದ ಒಂದೊಂದು ಶಬ್ಧಕ್ಕೂ ಕೂಡ ನಾನು ಧ್ವನಿಗೂಡಿಸುತ್ತೇನೆ. ಇದು ಪಕ್ಷದ ವಿಷಯ ಅಲ್ಲ. ವಾಟಾಳ್ ನಾಗರಾಜ್ ಅವರೂ ಹೇಳಿದ್ದಾರೆ. ಅದನ್ನೂ ನಾನು ಒಪ್ಪುತ್ತೇನೆ. ಬಹಳ ಮುಖ್ಯವಾಗಿ ನಾವು ನೋಡಬೇಕಾಗಿರತಕ್ಕದ್ದು ಎಂದರೆ ಯಾವುದೋ ಒಂದು ಸಮಯದಲ್ಲಿ ಏನೋ ಹೆಚ್ಚು ಕಡಿಮೆ ಆಯಿತು ಎಂದು ಹೇಳಿ ಆ ಸಂಸ್ಥೆಯನ್ನೇ ಭೂಗತ ಮಾಡುವ ರೀತಿಯಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುವುದು ಸೂಕ್ತ ಅಲ್ಲ.

ಬಹಳ ಹಿರಿಯರು ಹೇಳಿದ್ದಾರೆ, One swallow does not make a summer, ಎಂದು. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ವಿಶ್ವ ಖ್ಯಾತಿಯಾದಂಥ ಒಂದು ಸಂಸ್ಥೆ ಇದು. ವಿಶ್ವಖ್ಯಾತಿಯ ತರಬೇತಿ ಕೊಟ್ಟಂಥ ಒಂದು ಆಡಳಿತ ವರ್ಗ ಇದೆ. ಶ್ರೀನಿವಾಸನ್‌ರವರು, ಚೆನ್ನಸ್ವಾಮಿಯವರು ಈ ಕ್ರಿಕೆಟ್ ಸಂಸ್ಥೆಯನ್ನು ಕಟ್ಟುವುದರಲ್ಲಿ ಭೀಷ್ಮರಿದ್ದ ಹಾಗೆ. ಅವರ ಕೈಕೆಳಗೆ ತಯಾರಾದಂಥವರು ಡಾ : ತಿಮ್ಮಪ್ಪಯ್ಯ ಮತ್ತು ನಾಗರಾಜ್‌ರವರೇ ಸಹಪಾಠಿಗಳು, ಅವರ

ಕೈಕೆಳಗೆ ತಯಾರಾಗಿದ್ದು ವಿಶ್ವ ಖ್ಯಾತಿಯಾದಂಥ ಚಂದ್ರಶೇಖರ್, ವಿಶ್ವನಾಥ್, ಕಿರ್ಮಾನಿ ಇವರೆಲ್ಲಾ. ಇವರಲ್ಲದೆ ಇನ್ನೂ ಬಹಳ ಮುಖ್ಯಸ್ಥರಿದ್ದಾರೆ. ಕಸ್ತೂರಿರಂಗನ್ ಎನ್ನುವವರು One of the fastest bowlers, internationally. ಇಂತಹವರೆಲ್ಲ ಇದ್ದಾರೆ. ಇವರೆಲ್ಲಾ ಇರುವಾಗ, ಇಷ್ಟು ಅಚಾತುರ್ಯ ಆಗಲಿಕ್ಕೆ ಸಾಧ್ಯವಿಲ್ಲ. ಅವರೂ ವಿವರಗಳನ್ನು ಕೊಟ್ಟಿದ್ದಾರೆ. ಎಷ್ಟು ಸೀಟ್ಸ್ ಇದೆಯೋ ಅಷ್ಟೇ ಟಿಕೇಟ್‌ಗಳನ್ನು ನಾವು ಪ್ರಿಂಟ್ ಮಾಡಿದ್ದೇವೆ, ಹಂಚಿದ್ದೇವೆ, ಕೆಲವು ಕಡೆಯಿಂದ ಒತ್ತಾಯ ಬಂದಾಗ 100-200 ಕೊಟ್ಟಿದ್ದೇವೆಂದು ಬಹಳ ಕ್ಲಿಯರಾಗಿ ಹೇಳಿದ್ದಾರೆ. ಆದರೆ ಇವತ್ತು ಏನಾಗಿದೆಯೆಂದು ಹೇಳಿದರೆ, ತಮಗೆ ಅರ್ಥವಾಗುತ್ತದೆ, ಒತ್ತಾಯ ತರುವಂತ ಜನ ಬಹಳ ಇದ್ದಾರೆ. ಅದರಲ್ಲೂ ನಮ್ಮ ಪೊಲೀಸ್ ಇಲಾಖೆಯವರು ಪ್ರತಿಯೆಂದು ಕಡೆಯಲ್ಲೂ ಹಸ್ತಕ್ಷೇಪ ಮಾಡಲೇಬೇಕು. ಅವರು 100 ಟಿಕೇಟು ಬೇಕು ಎಂದರೆ 100 ಟಿಕೇಟುಗಳನ್ನು ಕೊಡಬೇಕು. 100 ಪಾಸ್ ಕೊಡಬೇಕು ಎಂದರೆ 100 ಪಾಸು ಕೊಡಬೇಕು. ಕೊಡಲಿಲ್ಲವೆಂದರೆ ಅವರ ಮೇಲೆ ಕಣ್ಣು ಇಡುತ್ತಾರೆ, ಆ ಜನ ಜಾಸ್ತಿ ಜನ ಬಂದರು ಗಲಾಟೆ ಆಯಿತು ಎನ್ನುವುದಕ್ಕೆ ಬೆಂಗಳೂರಿನಲ್ಲಿ, ಆ ದೇಶದಲ್ಲಿ ಮಾತ್ರ ಅಲ್ಲ. ಯೂರೋಪ್‌ನಲ್ಲಿ, ಇಂಗ್ಲೆಂಡ್‌ನಲ್ಲಿ, ಅಮೇರಿಕಾದಲ್ಲಿ ಎಲ್ಲಾ ಕಡೆ ಕೂಡ ಸಾಕಷ್ಟು ಪ್ರಮಾಣದಲ್ಲಿ ಅಂದರೆ ಒಂದು ಲಕ್ಷ ಜನ ಕ್ರೀಡಾಭಿಮಾನಿಗಳು ಹೋಗುವ ಜಾಗದಲ್ಲಿ ಹೆಚ್ಚು ಜನ ಹೋಗಿ ರೂಫ್ ಕೊಲಾಪ್ಸ್ ಆಗಿ ನೂರಾರು ಜನ ಸತ್ತಿರುವಂತಹ ಸಮಯಗಳು ಕೂಡ ಇದೆ. ಆದರೆ ಈ ಸಲ ಡೂಪ್ಲಿಕೇಟ್ ಟಿಕೇಟ್‌ಗಳನ್ನು ಮಾಡಿದ್ದಕ್ಕೆ ಕ್ರಿಕೇಟ್ ಆಡಳಿತ ವರ್ಗ ಜವಬ್ದಾರಿ ಅಲ್ಲ ಹೊರಗಡೆ ಯಾರೋ ಮಾಡಿದ್ದಾರೆ ಎಂದರೆ ಅದರ ಮೇಲೆ ಹೆಚ್ಚು ಗಮನ ಕೊಡಬೇಕಾದ್ದು, ಕೊಡುತ್ತಾ ಇದ್ದಾರೆಂದು ನಾನು ಭಾವಿಸುತ್ತೇನೆ. ಹಾಗೆಯೇ ಇವತ್ತು ನನಗೆ ಬಹಳ ದುಃಖವಾಯಿತು. ಇಂತಹ ಡಾ : ತಿಮ್ಮಪ್ಪಯ್ಯ ನಾಗರಾಜ್, ಕೃಷ್ಣಕಾಂತ ಇದ್ದಾರೆ. ಕೃಷ್ಣಕಾಂತ್‌ರವರ ವ್ಯಕ್ತಿತ್ವ ಏನು ಎನ್ನುವುದನ್ನು ಯಾರಾದರೂ ಅರ್ಥಮಾಡಿಕೊಂಡಿದ್ದಾರೆಯೇ? ಎಷ್ಟು ಕಾಲದಿಂದ ಬೆಂಗಳೂರು ನಗರದಲ್ಲಿ ಅವರು ಕೆಲಸ ಮಾಡಿದ್ದಾರೆ, ಸೇವೆ ಮಾಡಿದ್ದಾರೆ. ಅವರ ತಂದೆಯ ವ್ಯಕ್ತಿತ್ವ ಏನು? ಅವರ ತಂದೆ ಠಾಕುರ್‌ರವರ ವಿಷಯದಲ್ಲಿ ಮಾತನಡಬೇಕಾದರೆ ಬೆಂಗಳೂರು ನಗರದಲ್ಲಿ ಯೋಚನೆ ಮಾಡುವರು. ಇಂಥವರು ನಮ್ಮ ರಾಜ್ಯಕ್ಕೆ ಸಾಕಷ್ಟು ಸೇವೆಯನ್ನು ಮಾಡಿದ್ದಾರೆ. ಅವರು ಆಂಟಿಸಿಪೇಟರಿ ಬೇಲ್ ತೆಗೆದುಕೊಳ್ಳುವಂತಹ ಒಂದು ಸನ್ನಿವೇಶ ಬಂತು ಎಂದರೆ ನಾವು ಕನ್ನಡಿಗರಾಗಿ ತಲೆ ತಗ್ಗಿಸಬೇಕು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಅವರ ಹೆಸರುಗಳನ್ನು ನೋಡಿ ಅವರು ಅಂಟಿಸಿಪೇಟರಿ ಬೇಲ್ ತೆಗೆದುಕೊಳ್ಳುತ್ತಿದ್ದಾರೆಂದು ಕೇಳಿ ನನಗೆ ಬಹಳ ದುಃಖವಾಯಿತು. ಎಲ್ಲಾದರು ಉಂಟೇ ಸ್ವಾಮಿ, ಅವರು ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಕೆಲವು ಸಮಯದಲ್ಲಿ ಕೆಲಸ ಮಾಡಿದವನೇ ದುಡುಕುತ್ತಾನೆ, ಮುಂದಕ್ಕೆ ಹೋದವನೇ ಎಡವುತ್ತಾನೆ, ಎಡವಿದವನೇ ಬೀಳುತ್ತಾನೆ. ಅಂದ ಮಾತ್ರಕ್ಕೆ ಅವರ ವ್ಯಕ್ತಿತ್ವ ನೈತಿಕತ್ವ ಮಣ್ಣು ಪಾಲು ಆಗಿದೆ ಎಂದು ಹೇಳಿ ಅವರ ಮೇಲೆ ಸ್ವೇಚ್ಚಾಚಾರ, ವ್ಯಕ್ತಿಗತವಾಗಿ ಆರೋಪ ತರುವುದು ಸೂಕ್ತ ಅಲ್ಲ ಎಂದು ಭಾವಿಸುತ್ತೇನೆ. We have got to take it in a little more humane, kindly, with a sportive spirit. ಅದನ್ನು ಮಾಡದೆ ಈಗ ಪೊಲೀಸ್‌ನವರ ದಬ್ಬಾಳಿಕೆ ಬಹಳ ಆಗಿದೆ ಎಂದು ನಾನು ಕೇಳಿದ್ದೇನೆ. ಆ ಒಂದು ಕ್ರಿಕೆಟ್ ಅಸೋಷಿಯೇಷನ್, ಕ್ರಿಕೆಟ್ ಸ್ಟೇಡಿಯಂ ನನ್ನ ಕ್ಷೇತ್ರದಲ್ಲಿ ಇತ್ತು, ನಾನು ನಗರ ಪಾಲಿಕೆ ಸದಸ್ಯನಾಗಿ ಅದಕ್ಕೆ ಸಾಕಷ್ಟು ಸಹಾಯ ಮಾಡಿದ್ದೇನೆ. ಬೆಂಗಳೂರು ನಗರ ಪಾಲಿಕೆಯವರು ಲಕ್ಷಾಂತರ ರೂಪಾಯಿ ಕೊಟ್ಟಿದ್ದಾರೆ, ರಾಜ್ಯ ಸರ್ಕಾರವೂ ಕೊಟ್ಟಿದೆ. ಆ ಜಾಗ ಕೊಡುವಾಗ ಕೃಷ್ಣಮೆನನ್‌ರವರು ಕೊಡುವುದಿಲ್ಲವೆಂದು ಹೇಳಿದಾಗ ಬಹಳ

ಪ್ರಭಾವವನ್ನು ಬೀರಿ ಆ ಜಾಗವನ್ನು ಕೊಡಿಸಿದ್ದಾರೆ. ಇದು ಹಿಂದೆ ಡಿಫೆನ್ಸ್ ಕೈಯಲ್ಲಿ ಇತ್ತು. ಇಷ್ಟು ಪ್ರಭಾವವನ್ನು ಉಪಯೋಗಿಸಿ ಇವತ್ತು ವಿಶ್ವ ಖ್ಯಾತಿಯನ್ನು ಪಡೆದ, ಅದರಲ್ಲೂ ಕ್ರಿಕೆಟ್ ವರ್‌ಚಸ್ಸು ಕೆಳಗೆ ಬಿದ್ದು ಹೋಗುತ್ತಿದ್ದ ಕಾಲದಲ್ಲಿ ಇದು ಮೇಲೆ ಬರುವಂಥ ಒಂದು ಸಮಯದಲ್ಲಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆ ಸಮಯದಲ್ಲಿ ಈ ತರಹ ಮಾಡಿದರೆ ನಮ್ಮ ರೆಪ್ಯುಟೇಷನ್ ಏನಾಗುತ್ತದೆ ಕ್ರೆಡಿಬಲಿಟಿ ಏನಾಗುತ್ತದೆ ? ಇದನ್ನು ನಾವೆಲ್ಲಾ ಬಹಳ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಆದ್ದರಿಂದ ನಾವು ನಮ್ಮ ಸರ್ಕಾರದಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. Let the Police go slow and with a certain amount of maturity and understanding with that Management and being the culprits, who are outside that Management. ಅವರನ್ನು ಹಿಡಿಯುವುದಕ್ಕೆ ಏನಾದರೂ ಮಾಡಬೇಕು. ಯಾವುದನ್ನು ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುತ್ತೇನೆ. ಅಲ್ಲಿ ಬಹಳ ಮಟ್ಟಿಗೆ ರೈವಲ್ಸ್ ಇದ್ದಾರೆ. ಆ ಮ್ಯಾನೇಜ್‌ಮೆಂಟ್‌ಗೆ ಬರಬೇಕು ಎನ್ನುವ ಆ ಜನ ಬಹಳ ಕಾಲದಿಂದ ವಿರೋಧಮಾಡುತ್ತಿದ್ದಾರೆ. ದಯವಿಟ್ಟು ಈ ವಿಷಯದಲ್ಲಿ ಕರ್ನಾಟಕದ ಕ್ರಿಕೆಟ್ ವರ್ಚಸ್ಸನ್ನು ಉಳಿಸುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಡಾ. ಜೀವರಾಜ ಆಳ್ವರವರು, ವಾಟಾಳ್ ನಾಗರಾಜರವರು, ದೇಶಪಾಂಡೆಯವರು, ಅನಂತಕೃಷ್ಣರವರು ಮತ್ತು ಮಾಧುಸ್ವಾಮಿಯವರು ಏನು ವಿಚಾರ ಇಟ್ಟಿದ್ದಾರೆ ಅದಕ್ಕೆ ನನ್ನ ಸಹಮತಿ ಇದೆ. ಏಕೆಂದರೆ ಕ್ರಿಕೆಟಿನ ಒಂದು ಕ್ಷೇತ್ರದಲ್ಲಿ ಇವತ್ತು ವಿಶೇಷವಾದ ನಾಯಕತ್ವ ನಮ್ಮ ಕರ್ನಾಟಕ ವಹಿಸಿಕೊಂಡಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಕೂಡ ಇಂಥ ಶ್ರೇಷ್ಠವಾದಂಥ ಕ್ರಿಕೆಟ್ ಕ್ಷೇತ್ರಕ್ಕೆ ನಾಯಕತ್ವವನ್ನು ಕೊಟ್ಟಂಥ ಕೀರ್ತಿ ಬಹಳ ಅಪರೂಪವಾಗಿ ನಮ್ಮ ಪಾಲಿಗೆ ಬಂದಿದೆ. ಒಂದು ಕಾಲದಲ್ಲಿ ಟೆಸ್ಟ್ ಮ್ಯಾಚುಗಳಲ್ಲಿ 6-7 ಮಂದಿ ಕರ್ನಾಟಕದವರು ಇದ್ದಂಥ ಒಂದು ದೊಡ್ಡ ಕೀರ್ತಿ ನಮ್ಮ ಕರ್ನಾಟಕದ್ದು. ಈಗ ಒಬ್ಬರು ಬಹುಶಃ ಬಾಂಬೆಯವರು ಕುಂಬಳೇಯವರು, ಬಾಂಬೇನವರ ಲೆಕ್ಕಕ್ಕೆ ಸೇರುತ್ತಾರೆ, ನಮ್ಮ ಲೆಕ್ಕಕ್ಕೆ ಸೇರುತ್ತಾರೆ. ಆದರೆ ಅವರು ಕನ್ನಡಿಗರು. ನಮ್ಮ ಜಾವಗಲ್ ಶ್ರೀನಾಥ್‌ರವರು ಪೂರ್ತಾ ನಮ್ಮವರೇ ಎಂದು ಹೇಳಬಹುದು. ಇವೊತ್ತು ಇಂಥ ಒಂದು ವ್ಯಕ್ತಿತ್ವ ಪಡೆದಂಥ ಸ್ಪೋರ್ಟ್ಸ್ ಕ್ರಿಕೆಟ್ ಬಗ್ಗೆ ನಾವು ಹೆಮ್ಮೆ ಪಡಬೇಕು. ತಮಗೆ ಗೊತ್ತಿದೆ, ಶ್ರೀ ಸಿ. ನಾಗರಾಜರವರು, ಡಾ. ತಿಮ್ಮಪ್ಪಯ್ಯನವರು ಹಾಗೂ ಹಿಂದೆ ಚಿನ್ನಸ್ವಾಮಿಯವರು ಇವರುಗಳು ಇಂಥ ಒಂದು ಪ್ರತಿಭಾವಂತ ತಂಡವನ್ನು ಸೃಷ್ಟಿ ಮಾಡಿದವರು, ಅವರಿಗೆ ರೂಪ ಕೊಟ್ಟವರು. ಅವರುಗಳು ಹಗಲಿರುಳು ಕೆಲಸ ಮಾಡಿ ಹಾಗೂ ತ್ಯಾಗ ಮಾಡಿ ಇಂಥ ಒಂದು ವ್ಯಕ್ತಿತ್ವವನ್ನು ನಮ್ಮ ಕರ್ನಾಟಕಕ್ಕೆ ಕೊಟ್ಟಿದ್ದಾರೆ. ಲಂಡನ್ನ್‌ಲ್ಲಿ ಒಂದು ಎಕ್ಸಿಬಿಷನ್ ನಡೆಯಿತು. ಏಡಿಮಿನುಗಳನ್ನು ಎಕ್ಸಿಬಿಷನ್‌ನಲ್ಲಿಟ್ಟಿದ್ದರು. ಏಡಿ ಮಿನುಗಳನ್ನು ಬುಟ್ಟಿಯಲ್ಲಿಟ್ಟರು. ಆದರೆ ಒಂದು ಏಡಿ ಮಿನಿನ ಬುಟ್ಟಿಗೆ ಮುಚ್ಚಳ ಇರಲಿಲ್ಲ. ಆದರೆ ಏಡಿ ಮಿನು ಇದೆ. ಅದು ಹೊರಗೆ ಹಾರುತ್ತಿರಲಿಲ್ಲ. ಏಕೆಂದರೆ ಅದು ಕರ್ನಾಟಕದ ಏಡಿ ಮಿನು. ಸಾಧಾರಣವಾಗಿ ಇಂಥ ಏಡಿ ಮಿನುಗಳು ಭಾರತದಲ್ಲಿ ಜಾಸ್ತಿ ಏನೆಂದರೆ ಒಬ್ಬರು ಮತ್ತೊಬ್ಬರ ಕಾಲನ್ನು ಎಳೆಯುವುದು ಅಂದರೆ ಮುಚ್ಚಳ ಬೇಕಾಗಿಲ್ಲ. ಅವರವರೇ ಎಳೆದಾಡಿಕೊಂಡು ಕೆಳಗೆ ಹೋಗುತ್ತಾರೆ. ಇಂಥ ಪರಿಸ್ಥಿತಿ ಬರೀ ಕ್ರಿಕೆಟ್‌ನಲ್ಲಿ ಮಾತ್ರವಲ್ಲ, ಅನೇಕ ಉದ್ಯಮ ನಾಯಕರುಗಳು ಯಾವ ಪಕ್ಷದಲ್ಲೇ ಇರಲಿ ನಡೆಯುತ್ತಿರುತ್ತದೆ.

ಸಾಮಾಜಿಕ ನಾಯಕರುಗಳು, ಕಲಾವಿದರು ಬಹುಶಃ ಅನೇಕ ಬಾರಿ ಈ ಒಂದು ಟೆಕ್ನಾಲಜಿಯಲ್ಲಿ We have failed in projecting our leaders with their interinsic capacity. ಇದು. ನಮ್ಮನ್ನು ನಾವು ಎಳೆದು ಯಾವ ಕಾಂಪಿಟೆಶನ್ ಆಗಲಿ ಸ್ಪರ್ಧಾತ್ಮಕವಾದಂಥ ಓಟಕ್ಕೆ ಹೋಗಲಿಕ್ಕೇ ಇಲ್ಲಿ. ನಮ್ಮನ್ನು ನಾವು ಎಳೆದು ಕೆಳಗೆ ಹಾಕಿ, ಬಹಳ ನೆಮ್ಮದಿಯಿಂದ ವಿಕೃತವಾದ ತೃಪ್ತಿಯಿಂದ ನಗುವಂಥ ಪ್ರವೃತ್ತಿಯನ್ನು ನಾವು ನಿಲ್ಲಿಸದೇ ಹೋದರೆ ಕರ್ನಾಟಕದ ವ್ಯಕ್ತಿತ್ವ ಬೆಳೆಯುವುದಿಲ್ಲ. ಇದು ಕೇವಲ ಕ್ರಿಕೆಟ್‌ನಲ್ಲಿ ಮಾತ್ರವಲ್ಲ, ಎಲ್ಲದರಲ್ಲಿಯೂ ಕೂಡ. ಕ್ರಿಕೆಟ್‌ನಲ್ಲಿ ಸಿ.ಓ.ಡಿ. ಮೊದಲು ಸ್ವಲ್ಪ ಬಿರುಸಾಗಿ ಹೋಗಿತ್ತು, ಸುಮಾರು 5-6 ವರ್ಷಗಳ ಮೇಲೆ ಇಂತಹ ಒಂದು ದೊಡ್ಡ ಕ್ರಿಕೆಟ್ ಮ್ಯಾಚ್ ಆಗಿರತಕ್ಕದ್ದಾಗಿದೆ. ತಮಗೆ ಗೊತ್ತಿದೆ. ಅನೇಕ ಸಾರಿ ಇದು ಕರ್ನಾಟಕಕ್ಕೆ ಬರುವುದಿಲ್ಲ, ಇದರಲ್ಲೂ ಪಾಲಿಟಿಕ್ಸ್ ಇದೆ. ಕರ್ನಾಟಕಕ್ಕೆ ಟೆಸ್ಟ್ ಮ್ಯಾಚ್ ಬರುವುದಿಲ್ಲ. ಅದೂ ಕೆಲವು ಸಾರಿ ರಾಜಕೀಯವಾಗಿ ನಡೆದುಕೊಂದೇಬಂದಿದೆ. ಅಂಥದ್ದರಲ್ಲಿ ಒಂದು ಶ್ರೇಷ್ಠ ಸರಣಿಯನ್ನು ಬೆಂಗಳೂರಿನಲ್ಲಿ ಏರ್ಪಾಡು ಮಾಡಿದ್ದರು. ಏಕೆಂದರೆ ಆ ಪಾಪ್ಯುಲಾರಿಟಿನಲ್ಲಿ Our cricket team is in the climax to-day because of their two successive wins in Test. ಆ ಕ್ಲೈಮ್ಯಾಕ್ಸ್ ಇರುವುದರಿಂದ ಜಾಸ್ತಿ ಜನಜಂಗುಳಿಯಾಗಿದೆ. ಏತನ್ಮಧ್ಯೆ ಕೆಲವರು ಲಾಭ ಮಾಡಿಕೊಳ್ಳಲಿಕ್ಕೂ ಪ್ರಯತ್ನ ಮಾಡಿದ್ದಾರೆ. ಬೋಗಸ್ ಟಿಕೆಟ್ ಪ್ರಿಂಟ್ ಮಾಡಿಕೊಂಡು ಲಾಭ ಮಾಡಿಕೊಳ್ಳಲಿಕ್ಕೆ ಪ ್ರಯತ್ನ ಮಾಡಿದ್ದಾರೆ. ಆ ಶಕ್ತಿಗಳನ್ನು ಗುರುತಿಸಿಬೇಕೆಂಬ ಉದ್ದೇಶದಿಂದ ಸಿ.ಓ.ಡಿ. ಎನ್‌ಕ್ವರಿಗೆ ಆಜ್ಞೆ ಮಾಡಲಾಗಿದೆ. It is not against the office-bearers of the Karnataka State Cricket Association. We will ensure that the COD Enquiry Investigation will not be directd against them. This will be directed against those people have printed the boogus tickets. ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಆ ಡೈರೆಕ್ಷನನ್ನು ನಾವು ಬದಲಾವಣೆ ಮಾಡುತ್ತೇವೆ.

ಮಾನ್ಯ ಅನಂತ ಕೃಷ್ಣರವರು 50 ವರ್ಷಗಳಿಂದ ನಾವು ನೋಡುತ್ತಿದ್ದೇವೆ. 50 ವರ್ಷಗಳಿಂದ ಇಂತಹ ಉಜ್ವಲವಾದಂತಹ ವ್ಯಕ್ತಿಗಳು. ಇದ್ದಂಥಾದ್ದನ್ನು ನೋಡುತ್ತಿದ್ದೇವೆ ಎಂದು ಹೇಳಿದರು. ಅವರಿಗೆ ನೋವು ಮಾಡತಕ್ಕಂತಹ ಕೆಲವು ಪಟ್ಟಭದ್ರಾ ಹಿತಾಸಕ್ತಿಗಳು ಇವೆ. ಇವರ ವ್ಯಕಿತತ್ವಕ್ಕೆ ತೇಜೋವಧೆ ಮಾಡಬೇಕು ಎಂಬ ಕೆಲವು ಶಕ್ತಿಗಳು, ಕೆಲವು ಪಟ್ಟಭದ್ರಾ ಹಿತಾಸಕ್ತಿಗಳು ಕೂಡ ಇದೆ. ಅದಕ್ಕೆ ಖಂಡಿತವಾಗಿಯೂ ಕೂಡ ಸರ್ಕಾರ ಯಾವ ಅನುವೂ, ಅವಕಾಶವನ್ನೂ ಮಾಡಿಕೊಡದೇ ಯಾವುದೇ ರೀತಿಯಲ್ಲಿ ತೊಂದರೆ ಆಗದ ಹಾಗೆ ಯಾರು ಈ ಬೋಗಸ್ ಟಿಕೇಟ್‌ಗಳನ್ನು ಪ್ರಿಂಟ್ ಮಾಡಿದ್ದಾರೆ, ಏಕೆಂದರೆ ನಾವು ಸುಮಾರು ಬೋಗಸ್ ಟಿಕೇಟುಗಳನ್ನು ಪ್ರಿಂಟ್ ಮಾಡಿರುವವರನ್ನು ಹಿಡಿದಿದ್ದೇವೆ. ಮುಂದೆ ಇಂಥ ಬೋಗಸ್ ಟಿಕೇಟ್‌ಗಳ ಜಾಲ ಮತ್ತೆ ಬೆಳೆಯುವುದಕ್ಕೆ ಬಿಡಬಾರದು. ಬೋಗಸ್ ಟಿಕೇಟ್ ಪ್ರಿಂಟ್ ಮಾಡಿ ಮಾರತಕ್ಕಂತಹ ಪ್ರವೃತ್ತಿ ಜಾಲದಿಂದ ಕ್ರಿಕೇಟ್ ಅಸೋಷಿಯೇಷನ್ ಪದಾಧಿಕಾರಿಗಳಿಗೆ ತೊಂದರೆಯಾಗುತ್ತದೆ. ಆದುದರಿಂದ ಸಿಒಡಿಯ ಇನ್‌ವೇಸ್ಟಿಗೇಷನ್ ಮುಖ ನಾವು ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅನಂತಕೃಷ್ಣರವರು ಹೇಳಿದ ರೀತಿ ನೋಡಿದರೆ ಒಂದು

ರೀತಿ ನಮಗೆ ನೋವಾಗುತ್ತದೆ.

ಡಾ. ಜೀವರಾಜ ಆಳ್ವ : ಸಿಓಡಿ ಮುಖ ನೀವು ಹೇಳಿದ ತರಹದಲ್ಲಿ ತಿರುಗಿದ್ದರೆ ಸಂತೋಷ. As on now, it is so painful, The police officer whoever has harassed or whoever has motivated Dr. Thimmapaiah or Sri Krishnakant to seek anticipatory bail, that officer will have to be punished. ಇದು ಏನೋ ಒಂದು ಹೋಗಿ ಏನೋ ಒಂದು ಆಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಅನಿಸಿಕೆ ಅರ್ಥವಾಗಿದೆ. ಯಾರಾದರೂ ಪೋಲೀಸ್ ಅಧಿಕಾರಿಗಳು ಈ ಒಂದು ಪೀಡನೆಗೆ, ಹಿಂಸೆಗೆ ಮತ್ತು ಯಾವುದೇ ರೀತಿಯ ತೊಂದರೆಗೆ ಕಾರಣವಾಗಿದ್ದರೆ ನಾವು ಅದನ್ನು ಗುರುತಿಸಿ ಆ ಬಗ್ಗೆ ಕೂಡ ತನಿಖೆ ಮಾಡುತ್ತೇವೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಶ್ರೀಮತಿ ಗಂಗರತ್ನಮ್ಮನ ಮಗು ಅದಲು ಬದಲಾಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 5ನೇ ತಾರೀಖು ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಆಗತಾನೇ ಹೆರಿಗೆಯಾದಂತಹ ಮಕ್ಕಳನ್ನು ಅದಲುಬದಲು ಮಾಡಿರುವಂಥಾದ್ದು ಪ್ರಕಟವಾಗಿದೆ. ಈ ಮಧ್ಯೆ ಕುಷ್ಟಗಿ ಹಗರಣ ಬಂದಿದ್ದರಿಂದಲೂ, ತುಂಬಾ ಪ್ರಾಮುಖ್ಯವಾಗಿದ್ದರಿಂದಲೂ ನಾವು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಆಗಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಈ ತಾಯಿಯ ಕುಡಿಯನ್ನೇ ಅದಲುಬದಲು ಮಾಡುವಂಥಾದ್ದು, ಮತ್ತು ಎಳೆಯ, ಹಸುಳೆಗಳನ್ನು ಅಕ್ರಮ ವ್ಯವಹಾರ ಮಾಡವಂಥಾದ್ದು, ಆ ಮಕ್ಕಳನ್ನು ಮಾರುವಂಥಾದ್ದು, ಹೆಣ್ಣುಮಕ್ಕಳಾದರೆ 5 ರಿಂದ 6 ಸಾವಿರದವರೆಗೆ ಮಾರುವುದು, ಗಂಡು ಮಕ್ಕಳಾದರೆ 8 ರಿಂದ 10 ಸಾವಿರದವರೆಗೆ ಮಾರುವುದು, ಇದು ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಮತ್ತು ಇತರ ಕಡೆ ನಡೆಯುತ್ತಿದೆ. ಇಂತಹ ಅನೇಕ ಘಟನೆಗಳು ನಡೆದಿದ್ದು ಸಂಬಂಧಪಟ್ಟವರು ಕೊಟ್ಟಿರುವಂತಹ ದೂರುಗಳು ಇವೆ. ಅವುಗಳನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಈ ಸಮಯದಲ್ಲಿ ನಡೆದಿರುವಂತಹ, ನೇರವಾದಂತಹ ವಿಷಯಗಳಿಂದರೆ, ಬೆಂಗಳೂರಿನ ಗ್ರಾಮಾಂತರದ ಹತ್ತಿರ ಇದ್ದಂತಹ ಗಂಗ ರತ್ನಮ್ಮ ಎಂಬುವವರಿಗೆ ಹೋದ ಮಂಗಳವಾರ ವಾಣಿವಿಲಾಸ ಆಸ್ಪತ್ರೆಯಲ್ಲಿ ಹೆರಿಗೆಯಾಯಿತು. ಬೆಳಿಗ್ಗೆ 10-30ಕ್ಕೆ ಒಂದು ಗಂಡು ಮಗುವಿಗೆ ಜನ್ಮ ನೀಡಿದಳು. ಆ ಗಂಡು ಮಗು ಹುಟ್ಟಿದ ತಕ್ಷಣ, ಅಧಕ್ಕೆ ಗುರುತಿನ ಚೀಟಿ ಹಾಕಿ, ಅದು ತುಂಬ ನಿಶ್ಯಕ್ತವಾಗಿದೆ ಎಂದು ಇನ್‌ಕ್ಯೂಬಿಲೇಟರ್‌ನಲ್ಲಿ ಇಟ್ಟು ಮಗುವನ್ನು ಉಳಿಸುವುದಕ್ಕೋಸ್ಕರ ತೆಗೆದುಕೊಂಡು ಹೋದರು. ಆ ಮಗು ಹೆರಿಗೆಯಾಗುವಂತಹ ಸಂದರ್ಭದಲ್ಲಿ ಅವರ ಸಂಬಂಧಿಕರಾದ ಶಾಂತಮ್ಮ ಎನ್ನುವವರು ಪಕ್ಕದಲ್ಲೇ ಇದ್ದರು. ಗಂಡು ಮಗು ಹುಟ್ಟಿದ ತಕ್ಷಣ ಆ ಮಗುವನ್ನು ತೋರಿಸಿದರು. ಮಾರನೇ ದಿವಸ ಅಂದರೆ ಬುಧವಾರ ಬೆಳಿಗ್ಗೆ ಮಗುವಿಗೆ ಹಾಲು ಕುಡಿಸುವುದಕ್ಕೆ ಮೇಲ್ಗಡೆ ಕರೆದುಕೊಂಡು ಹೋದರು. ಹಾಲು ಕುಡಿಸುವುದಕ್ಕೆ ಹೋದಾಗ ಗಂಡು ಮಗುವನ್ನು ಬಿಟ್ಟು ಹೆಣ್ಣುಮಗುವಿಗೆ ಹಾಲು ಕುಡಿಸು ಎಂದು ಹೇಳಿದರು. ಯಾವ ತಾಯಿಯ ಮನಸ್ಸು ತನ್ನ ಮಗು ಅಲ್ಲದಿದ್ದಕ್ಕೆ ಹಾಲು ಕುಡಿಸುವುದಕ್ಕೆ ಒಪ್ಪುತ್ತದೆ. ಇದು ಮಾನವೀಯತೆಯ ಪ್ರಶ್ನೆ. ಸಹಜವಾಗಿ ಆಕೆ ಇದನ್ನು ಪ್ರತಿಭಟಿಸಿದಳು. ಆದರೆ ಅವರು ಇದು ನಿನ್ನದೇ ಮಗು ಎಂದು ಒತ್ತಾಯ ಮಾಡುವಂತಹ ಪ್ರಯತ್ನ ಮಾಡಿದರು. ಇದು ಅವಳ ಸಂಬಂಧಿಕಳಾದ ಶಾಂತಮ್ಮನಿಗೆ